

‘ಹ್ಹಾ!’ ಪ್ವರೊ ಹೇಳಿದ. ‘ಅದನ್ನು ಹೇಗೆ ನಾಶ ಮಾಡುತ್ತಾನೆ?’

‘ಪೆಟ್ರೋಲ್ ಮತ್ತು ಪಿಚಕಾರಿಯಿಂದ. ಕಣಜದ ಗೂಡಿಗೆ ಮುಟ್ಟುವಂತಹ ದೊಡ್ಡ ಪಿಚಕಾರಿ ಅವನ ಮನೆಯಲ್ಲಿರುವುದರಿಂದ ಅದನ್ನು ಅವನೇ ತರುತ್ತೇನೆಂದು ಹೇಳಿದ್ದಾನೆ.’

‘ಅದನ್ನು ನಾಶ ಮಾಡಲು ಇನ್ನೊಂದು ವಿಧಾನವಿದೆಯಲ್ಲವೇ?’ ಪ್ವರೊ ಕೇಳಿದ. ‘ಪೊಟ್ಯಾಷಿಯಂ ಸಯನೈಡ್(Potassium Cyanide)?’

ಹ್ಯಾರಿಸನ್ ಸ್ವಲ್ಪ ಆಶ್ಚರ್ಯವಾದಂತೆ ಕಾಣಿಸಿದ. ‘ಹೌದು, ಅದು ಅಪಾಯಕಾರಿ ವಸ್ತು. ಅದನ್ನು ಮನೆಯ ಸುತ್ತಮುತ್ತ ಇಟ್ಟುಕೊಳ್ಳುವುದು ಸ್ವಲ್ಪ ಹಾನಿಕಾರಕ.’

ಪ್ವರೊ ಚಿಂತಾಜನಕವಾಗಿ ತಲೆಯಲ್ಲಾಡಿಸಿದ. ‘ಹೌದು ಅಪಾಯಕಾರಿ ವಿಷ.’ ಒಂದು ನಿಮಿಷ ಯೋಚಿಸಿದ ನಂತರ ಅವನು ಗಂಭೀರ ಧ್ವನಿಯಲ್ಲಿ ಪುನರುಚ್ಚರಿಸಿದ, ‘ಅಪಾಯಕಾರಿ ವಿಷ.’

‘ನಿನ್ನ ಅತ್ತೆಗೇನಾದರೂ ಒಂದು ಗತಿ ಕಾಣಿಸಬೇಕೆಂದಿದ್ದರೆ ಅದು ಉಪಯೋಗಕಾರಿಯಲ್ಲವೇ?’ ಹ್ಯಾರಿಸನ್ ನಗುತ್ತಾ ಹೇಳಿದ.

ಆದರೆ ಹರ್ಕ್ಯುಲ್ ಪ್ವರೊ ಗಂಭೀರವಾಗಿಯೇ ಇದ್ದ. ‘ನಿನ್ನ ಕಣಜದ ಗೂಡನ್ನು ನಾಶ ಮಾಡಲು ಮಸ್ಯೂರ್ ಲ್ಯಾಂಗ್ಟನ್ ಪೆಟ್ರೋಲನ್ನೇ ಬಳಸುತ್ತಾನೆ ಎಂಬುದರಲ್ಲಿ ನಿನಗೆ ಸಂಪೂರ್ಣ ಖಾತ್ರಿಯಿದೆಯಾ, ಹ್ಯಾರಿಸನ್?’